ಶ್ರೀ ಎ. ಜೆ. ದೊಡ್ಡಮೇಟಿ.—ಆ ಎರಡೂ ಇಲ್ಲ. 20 ವರ್ಷಗಳಿಂದ ಯಾವ ಕಾರಣಕ್ಕಾಗಿ ನಿಧಾನವಾಯಿತು ಎಂಬುದನ್ನು ಹೇಳಬೇಕಾಗಿದ್ದುದರಿಂದ ಹಾಗೆ ಮಾಡಬೇಕಾಯಿತು. ಇತಿಹಾಸವನ್ನು ಒಂದೇ ಮಾತಿನಲ್ಲಿ ಹೇಳುವುದಕ್ಕಾಗುವುದಿಲ್ಲ. ಇದು ಒಬ್ಬರದೇ ತಪ್ಪು ಎಂದು ಹೇಳಲು ಸಾಧ್ಯವಿಲ್ಲ. ಕೆಲವು ಕಡೆ ಆಫೀಸರ ತಪ್ಪಿರಬಹುದು, ಕೆಲವು ಕಡೆ ಊರಿನವರ ತಪ್ಪಿರಬಹುದು. 20 ವರ್ಷದ ವಿಚಾರ ಹೇಳಲು ಹಾಗೆ ಮಾಡಬೇಕಾಯಿತು. ಅದು ಸ್ಟೇಟ್‌ಮೆಂಟಲ್ಲ. ಸಾವಲ್ಯಂಗ ಕೆರೆಯನ್ನು ನೀರಾವರಿ ಕೆರೆಯಾಗಿ ಈ ಕೂಡಲೆ ತೆಗದುಕೊಳ್ಳಲಾಗುತ್ತದೆ.

ಶ್ರೀ ಎಸ್. ಎಸ್. ಅರಕೇರಿ.—ಈಗಾಗಲೇ 20 ವರ್ಷಗಳಿಂದ ಎಸ್ಟಿಮೇಟ್ ಮಾಡುವುದೇ ಆಗಿದೆ. ಇದು ಯಾವಾಗ ಮುಗಿಯುವುದು ? ಯಾವಾಗ ಕೆರೆ ಕೆಲಸವನ್ನು ತೆಗೆದುಕೊಳ್ಳಲಾಗುವುದು ?

ಶ್ರೀ ಎ. ಜೆ. ದೊಡ್ಡಮೇಟಿ.—ನೀರಾವರಿ ಕೆರೆಯಾಗಿ ಮಾಡಲು ಬೇಕಾದ ಕಾರ್ಯಕ್ರಮವನ್ನು ಕೂಡಲೇ ತೆಗೆದುಕೊಳ್ಳಲಾಗುವುದು.

ಶ್ರೀ ಬಿ. ಪರಮೇಶ್ವರಪ್ಪ.—ರಾಜ್ಯ ಮಂತ್ರಿಗಳು ಉತ್ತರ ಕೊಡುವ ವಿಚಾರದಲ್ಲಿ ಗಲಾಟೆಯಾದುದರಿಂದ ಒಟ್ಟು ಒಂದು ಗಂಟೆಯಲ್ಲಿ ಸುಮಾರು ಮುಕ್ಕಾಲು ಗಂಟೆ ಕಾಲ ಹಾಳಾಗಿ ಹೋಯಿತು. ಇದರಿಂದ ಬಹಳ ವ್ಯಸನವಾಗುತ್ತಿದೆ.

## Rehabilitation Committee under Hemavathy

63. Sri H. N. NANJE GOWDA (Arkalgud).—

Will the Chief Minister be pleased to state:—

(*a*) whether Government have constituted a Rehabilitation committee under Hemavathy for Rehabilitation of displaced persons under the project, if so, who are all the official and non-official members of that Committee (names of the non-official members with designation may be given);

(*b*) whether any proposals were received by the Government from the concerned Divisional Commissioner recommending for the constitution of the said Committee, if so, the names of Members recommended by him;

(*c*) whether the Divisional Commissioner, while recommending, considered the advice of the Chief Minister tendered to him while the Chief Minister was on tour in Hassan District on 7th November 1967;

(*d*) if so, the advice tendered by the Chief Minister to the Divisional Commissioner, regarding Constitution of the said Committee;

(*e*) whether any names of the Members of this House are included in the list of the constituted committee, if so, the number of acres of land that would be submerged in the constituency of such Member;

(*f*) whether the names of any of the members of this House in whose constituency lands are to be submerged is not included in the list of the constituted Committee. If so, the extent of lands to be submerged in the Constituency of such members may be given ?

*A.*—Sri **VEERENDRA PATIL** (Chief Minister).—

(*a*) Yes. The following are the official and non-official members of that Committee :

*Official Members.*—

1 Divisional Commissioner, Mysore Divison, Mysore — *Chairman*
2 Deputy Commissioner, Hassan.
3 Superintending Engineer, Hemavathy Reservoir Construction Circle.
4 District Forest Officer, Hassan.
5 District Health Officer, Hassan.
6 Executive Engineer, Hemavathy Dn., Gorur.
7 Spl. Land Acquisition Officer, Hemavathy Project—*Member-Secretary.*

*Non-Official Members.*—

*Sriyuths:*—

1 B. Nanjappa, MLA., President Taluk Development Board, Hassan.
2 K. B. Mallappa, President, Taluk Board, Arkalgud.
3 B. R. Nanjunde Gowda, Vice-President, T.D.B., Alur.
4 K. P. Chikke Gowda, MLA., Alur.
5 S. M. Lingappa, President, Taluk Development Board, K. R. Pet.
6 H. D. Deve Gowda, MLA., Holenarsipur.
7 N. A. Channe Gowda, MLA., Pandavapura.
8 G. A. Thimmappa Gowda, Ex-MLA., President, District Co-operative Bank, Hassan.

(*b*) Yes. The following names were recommended by the Divisional Commissioners.

*Chairman.*—

1 Divisional Commissioner, Mysore Division, Mysore.

*Members.*—

2 Dy. Commissioner, Hassan District
3 Dy. Commissioner, Mandya District
4 Superintending Engineer, Hemavathy Reservoir Construction Circle.
5 District Forest Officer Hassan
6 District Health Officer, Hassan
7 Assistant Commissioner, Hassan Sub-Division
8 Assistant Commissioner, Saklespur Sub-Division.

Sriyuths:

9 H. B. Jwalanaiah, MLA., Hassan Taluk.
10 K. P. Chikke Gowda, MLA., Alur.
11 H. N. Nanje Gowda, MLA., Arkalgud.
12 G. Sampathiengar, Landlord, Gorur
13 G. A. Thimmappa Gowda, Advocate
14 H. N. Siddappa, Landlord, Hemmige, Alur Taluk.
15 President, Taluk Development Board, K. R. Pet.
16 M. K. Bomn egowda, MLA., K. R. Pet.
17 Dr. C. Bandigowda, M.B.B.S., MLC., Srirangapatna.
18 Spl. Land Acquisition Officer, Hemavathy Project—*Member-Secretary.*

(*c*) No advice was tendered by Chief Minister.

(*d*) Does not arise.

(*e*) Yes.

| Name of the MLA | Taluk | Total acreage coming under Submersion under Hemavathy Project |
|---|---|---|
| 1. Sri B. Nanjappa | Gandasi Constituency parts of Hassan and Arsikere Taluk. | Nil. |
| 2. Sri K. P. Chikke Gowda. | Saklespur Constituency, Alur and Saklespur. | Alur Taluk 4,995 acres. |
| 3. Sri H. D. Deve Gowda. | Holenarsipur Constituency (Holenarasipur Taluk and part of Channarayapatna Taluk *i e.*, Dandiganahally Hobli). | Holenarsipur Taluk Nil |

(*f*) The names of Sriyuths: H. N. Nanje Gowda, MLA , Arkalgud and H. B. Jwalaniah, MLA., Hassan, in whose constituencies lands come under submersion have not been included in the Rehabilitation Committee constituted in G.O. No. PWD 13 GHK 65, dated 6th April 1968. The details of extent of lands coming under submersion in the constituencies of these two members are as follows.—

| | *Acres* | *Guntas* |
|---|---|---|
| 1. Hassan Constituency | 2,461 | 39 |
| 2. Arkalgud Constituency | 5,429 | 03 |

ಶ್ರೀ ಎಚ್. ಎನ್. ನಂಜೇಗೌಡ.—ಮುಳುಗಡೆಗೆ ಸಂಬಂಧಪಟ್ಟ ಸಮಿತಿಯಲ್ಲಿ ಜನತಾ ಪ್ರತಿನಿಧಿಗಳನ್ನು ಸೇರಿಸುತ್ತೀರಾ?

† ಶ್ರೀ ವೀರೇಂದ್ರ ಪಾಟೀಲ್.—ಸೇರಿಸುವುದಿದೆ. ಯಾರ ಆವಶ್ಯಕತೆ ಇದೆ ಯಾರನ್ನು ಸೇರಿಸಿದ್ದಾದರೆ ಅನುಕೂಲ ಎಂದು ನೋಡಿ ಬೇಕಾದವರನ್ನು ಸೇರಿಸಲಾಗುವುದು. ಆದರೆ ಸಂಖ್ಯೆ ಕಡಿಮೆ.

ಶ್ರೀ ಎಚ್. ಎನ್. ನಂಜೇಗೌಡ.—ಅರಕಲಗೂಡು ತಾಲ್ಲೂಕಿನಲ್ಲಿ ಬಹಳ ಭಾಗ ಎಲ್ಲಕ್ಕಿಂತ ಹೆಚ್ಚು ಭಾಗ ಜಮೀನು ಮುಳುಗಡೆಯಾಗುವುದರಿಂದ ಅದನ್ನು ಗಮನಿಸಿ ಅರಕಲಗೂಡು ತಾಲ್ಲೂಕು ಮತ್ತು ಹಾಸನ ತಾಲ್ಲೂಕು ಸದಸ್ಯರನ್ನು ಸೇರಿಸಿ ಡಿವಿಜನಲ್ ಕಮೀಷನರು ಒಂದು ಪಟ್ಟಿಯನ್ನು ಮಾಡಿದರು. ಆದರೆ.....

ಅಧ್ಯಕ್ಷರು.—ನೀವು ಭಾಷಣ ಮಾಡುತ್ತಿದ್ದೀರಿ.

Sri H. N. NANJE GOWDA.—Sir, I know how to participate in the debate. I request the Chair not to interfere while I am putting questions otherwise the points will be lost. The Government is committing blunders.

Mr. SPEAKER.—The member may put a question instead making a speech.

ಶ್ರೀ ಎಚ್. ಎನ್. ನಂಜೇಗೌಡ.— ಡಿವಿಜನಲ್ ಕಮಿಷನರ್ ಕಳಿಸಿರತಕ್ಕ ಪಟ್ಟಿಯಲ್ಲಿ ಇಬ್ಬರು ಎಂ. ಎಲ್. ಎ. ಗಳ ಹೆಸರನ್ನು ಬಿಡಬೇಕಾದರೆ ಅದಕ್ಕೆ ಪ್ರಬಲವಾದ ಕಾರಣವೇನು? ಅವರು ಅನುಪಯುಕ್ತರು ಎನ್ನುವ ಉದ್ದೇಶದಿಂದ ಬಿಡಲಾಗಿದೆಯೋ ಅಥವಾ ರಾಜಕೀಯಕ್ಕೋಸರ ಬಿಡಲಾಗಿದೆಯೋ ಸ್ವಾಮಿ?

ಶ್ರೀ ವೀರೇಂದ್ರ ಪಾಟೀಲ್.—ಡಿವಿಜನಲ್ ಕಮಿಷನರ್ ಒಂದು ಪ್ಯಾನೆಲ್ ಕಳಿಸುತ್ತಾರೆ. ಅವರು ಕಳಿಸಿದ ಎಲ್ಲ ಹೆಸರುಗಳನ್ನೂ ಸೇರ್ಪಡೆ ಮಾಡುವುದಕ್ಕಾಗುವುದಿಲ್ಲ. ಅವರು ಕಳಿಸಿರುವ ಪಟ್ಟಿಯಿಂದ ನಾವು ಆರಿಸಿಕೊಳ್ಳುತ್ತೇವೆ.

ಶ್ರೀ ಎಚ್. ಬಿ. ಜ್ವಾಲನಯ್ಯ.— ಹೇಮಾವತಿ ಪಾಜೆಕ್ಟ್‌ನಿಂದ ಹಾಸನ ಮತ್ತು ಅರಕಲಗೂಡು ಕ್ಷೇತ್ರಗಳಿಗೆ ಸಂಬಂಧಪಟ್ಟ ಪ್ರದೇಶಗಳಲ್ಲಿ ಬಹುಮಟ್ಟಿಗೆ ಮುಳುಗಡೆ ಆಗತಕ್ಕ ಪ್ರದೇಶವಿದ್ದು ಮಾನ್ಯ ಮುಖ್ಯ ಮಂತ್ರಿಗಳು ಎಲ್ಲ ವಿರೋಧ ಪಕ್ಷದವರ ಸಹಕಾರ ಬೇಕು ಎಂದು ಹೇಳುತ್ತಿರುವ ಸಂದರ್ಭದಲ್ಲಿ ಅರಕಲಗೂಡು ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಅಲ್ಲಿಂದ ಆರಿಸಿಬಂದಿರುವ ಶ್ರೀಮಾನ್ ನಂಜೇಗೌಡರಿದ್ದರೂ ಅಲ್ಲಿ ಸೋತ ಒಬ್ಬ ಎಂ. ಎಲ್. ಎ. ಗೆ ಪ್ರಾತಿನಿಧ್ಯವನ್ನು ಕೊಟ್ಟಿರುವುದು ಮತ್ತು ಹಾಸನ ಕ್ಷೇತ್ರಕ್ಕೆ, ಒಂದು ಪಕ್ಷದ ಮುಖಂಡನಾಗಿ ನಾನು ಇಲ್ಲಿದ್ದರೂ ನನ್ನ ಹೆಸರನ್ನೂ ಬಿಟ್ಟು ಬೇರೆಯವರನ್ನು ಸೇರಿಸಿರುವುದರಲ್ಲಿರುವ ದುರುದ್ದೇಶವಾದರೂ ಏನು ಎನ್ನುವುದನ್ನು ಮಾನ್ಯ ಮುಖ್ಯ ಮಂತ್ರಿಗಳು ಹೇಳುತ್ತಾರೆಯೇ?

ಶ್ರೀ ವೀರೇಂದ್ರ ಪಾಟೀಲ್.—ಯಾವುದೇ ರಾಜಕೀಯ ದುರುದ್ದೇಶದಿಂದ ವಿರೋಧಪಕ್ಷದವರಿಗೆ ಪ್ರಾತಿನಿಧ್ಯ ಕೊಡಬಾರದೆನ್ನುವ ವಿಚಾರವಿಲ್ಲ. ಪಟ್ಟಿಯನ್ನು ನೋಡಿದರೆ ವಿರೋಧಪಕ್ಷದ ಸದಸ್ಯರು ಬಹಳ ಜನರಿದ್ದಾರೆ. ಮೂರು ಜನ ವಿರೋಧ ಪಕ್ಷದವರಿದ್ದು ಒಬ್ಬರು ಮಾತ್ರ ಕಾಂಗ್ರೆಸ್ ಪಕ್ಷದವರಿದ್ದಾರೆ. ಕೇವಲ ಎಂ. ಎಲ್. ಎ. ಗಳಿಗೆ ಆ ಕಮಿಟಿಗಳಲ್ಲಿ ಪ್ರಾತಿನಿಧ್ಯತೆಯನ್ನು ಕೊಡುವುದಕ್ಕಾಗುವುದಿಲ್ಲ. ಅದರಲ್ಲಿ ಪ್ರಾತಿನಿಧ್ಯತೆಯನ್ನು ಎಂ. ಎಲ್. ಎ. ಗಳಿಗೆ, ಕೋ-ಆಪರೇಟಿವ್ ಬ್ಯಾಂಕ್‌ಗಳಿಗೆ, ತಾಲ್ಲೂಕು ಬೋರ್ಡ್‌ಗಳಿಗೆ ಎಲ್ಲರಿಗೂ ಕೊಟ್ಟಿದ್ದೇವೆ.

ಇನ್ನೊಂದು ವಿಚಾರವೇನೆಂದರೆ ಕೇವಲ ಮುಳುಗಡೆಯಾಗತಕ್ಕ ಪ್ರದೇಶದ ಜನರಿಗೆ ಪ್ರಾತಿನಿಧ್ಯತೆಯನ್ನು ಕೊಡಬೇಕು ಎನ್ನುವಂಥದ್ದಿಲ್ಲ. ಇತ್ತೀಚೆಗೆ ಸರ್ಕಾರದ ಯೋಜನೆಯ ಪ್ರಕಾರ ಯಾವ ಯಾವ ರಿಸರ್ವಾಯರ್ ಕಟ್ಟುತ್ತೇವೆ, ಯಾವ ಯಾವ ಪ್ರದೇಶ ಮುಳುಗಡೆಯಾಗುತ್ತದೆ, ಆ ಪ್ರದೇಶಗಳವರಿಗೆ ಕಮಾಂಡ್ ಏರಿಯಾದಲ್ಲಿ ಪುನರ್ವಸತಿಯನ್ನು ಕಲ್ಪಿಸಬೇಕು ಎನ್ನುವ ಧೋರಣೆಯನ್ನು ತಾಳಿದ್ದೇವೆ. ಎಲ್ಲಿಯಾದರೂ ಪುನರ್ವಸತಿಯನ್ನು ಕಲ್ಪಿಸಿದರೆ ಜನರಿಗೆ ಕಷ್ಟವಾಗಬಹುದು ಎಂದು ಕಮಾಂಡ್ ಏರಿಯಾದಲ್ಲಿ ಭೂಮಿಯನ್ನು ಆಕ್ವೈರ್ ಮಾಡಿಕೊಂಡು ಅಥವಾ ಸರ್ಕಾರದ ಭೂಮಿ ಇದ್ದರೆ ಅದನ್ನು ಅಂಥ ಜನರ ಸಲುವಾಗಿ ಕಾಯ್ದಿಟ್ಟು ಅಲ್ಲಿ ಪುನರ್ವಸತಿಯನ್ನು ಕಲ್ಪಿಸಬೇಕು ಎನ್ನುವ ಉದ್ದೇಶದಿಂದ ಮುಳುಗಡೆಯಾಗುವ ಪ್ರದೇಶದವರಿಗೆ, ಕಮಾಂಡ್ ಏರಿಯಾದಲ್ಲಿರು

ವವರಿಗೆ, ಎಂ. ಎಲ್. ಎ. ಗಳಿಗೆ, ತಾಲ್ಲೂಕು ಬೋರ್ಡ್‌ಗಳಿಗೆ ಮತ್ತು ಸಹಕಾರ ಬ್ಯಾಂಕುಗಳಿಗೆ ಪ್ರಾತಿನಿಧ್ಯತೆಯನ್ನು ಕೊಟ್ಟಿದ್ದೇವೆ. ಈ ರೀತಿಯಾಗಿ 8 ಜನರು ಇರುವ ಕಮಿಟಿಯಲ್ಲಿ ಎಷ್ಟರಮಟ್ಟಿಗೆ ಪ್ರಾತಿನಿಧ್ಯತೆಯನ್ನು ಎಂ. ಎಲ್. ಎ. ಗಳಿಗೇ ಕೊಡುವುದಕ್ಕಾಗುತ್ತದೆ ಎನ್ನುವುದನ್ನು ನೋಡ ಬೇಕು.

ಶ್ರೀ ಎಲ್. ಶ್ರೀಕಂಠಯ್ಯ.—ಪುನರ್ವಸತಿ ಸಮಿತಿಗಳನ್ನು ಮಾಡತಕ್ಕದ್ದು ಯಾವ ಪ್ರದೇಶದಲ್ಲಿ ಹೆಚ್ಚು ಸ್ಪದೇಶ ಮುಳುಗಡೆಯಾಗುತ್ತದೆ ಅಲ್ಲಿ ತೊಂದರೆಗೆ ಒಳಗಾದ ಜನರಿಗೆ ಸಹಾಯ ವಾಗುವಂತೆ ಜಾಗವನ್ನು ಕೊಡಬೇಕು ಎಂದು. ಪ್ರಶ್ನೆಗೆ ಕೊಟ್ಟಿರುವ ಉತ್ತರವನ್ನು ನೋಡಿದರೆ ಶ್ರೀ ಬಿ. ನಂಜಪ್ಪ, ಗಂಡಸಿ ಕ್ಷೇತ್ರ, ಮುಳುಗಡೆಯಾಗುವ ಜಮೀನಿನ ವಿಸ್ತೀರ್ಣ ಏನೂ ಇಲ್ಲ; ಎಚ್. ಡಿ. ದೇವೇಗೌಡ ಹೊಳೆನರಸೀಪುರ ಕ್ಷೇತ್ರ—ಏನೂ ಇಲ್ಲ, ಎಂದು ಇದೆ. ಆದರೆ ಹಾಸನ ಕ್ಷೇತ್ರದಲ್ಲಿ 2,461 ಎಕರೆಗಳು ಮತ್ತು ಅರಕಲಗೂಡು ಕ್ಷೇತ್ರದಲ್ಲಿ 5,429 ಎಕರೆಗಳೂ ಮುಳುಗಡೆ ಯಾಗುತ್ತವೆ. ಇಷ್ಟಾದರೂ ಕೂಡ ಆ ಜನರನ್ನು ಪ್ರತಿನಿಧಿಸುವ ಈ ಸಭೆಯ ಸದಸ್ಯರನ್ನು ಕಮಿಟಿಯಲ್ಲಿ ಹಾಕುವುದಕ್ಕೆ ಏನು ಬಾಧಕವಿತ್ತು ಸ್ವಾಮಿ ?

ಶ್ರೀ ವೀರೇಂದ್ರ ಪಾಟೀಲ್.—ಆ ಪ್ರದೇಶದ ಪ್ರತಿನಿಧಿಗಳನ್ನು ಹಾಕಿದ್ದೇವೆ ಎಂದು ಹೇಳಿದ್ದೇನೆ. ಪ್ರಾತಿನಿಧ್ಯತೆಯನ್ನು ಕೊಡುವಾಗ ಎಲ್ಲ ಎಂ. ಎಲ್. ಎ. ಗಳಿಗೂ ಕೊಡುವುದಕ್ಕಾಗು ವುದಿಲ್ಲವೆಂದು ಈಗತಾನೇ ಹೇಳಿದ್ದೇನೆ. ಅರಕಲಗೂಡು ತಾಲ್ಲೂಕು ಪ್ರತಿನಿಧಿಯಾಗಿ ಅಲ್ಲಿನ ತಾಲ್ಲೂಕು ಬೋರ್ಡ್ ಅಧ್ಯಕ್ಷರಿಗೆ ಕೊಟ್ಟಿದ್ದೇವೆ, ಅದೇ ರೀತಿ ಹಾಸನ ತಾಲ್ಲೂಕಿನಲ್ಲಿ ಶ್ರೀಮಾನ್ ಬಿ. ನಂಜಪ್ಪನವರು ಗಂಡಸೀ ಕ್ಷೇತ್ರದ ಎಂ. ಎಲ್. ಎ. ಆದರೂ ಅದರ ಜೊತೆಗೆ ಅವರು ಹಾಸನ ತಾಲ್ಲೂಕು ಬೋರ್ಡಿನ ಅಧ್ಯಕ್ಷರಾಗಿದ್ದಾರೆ. ಆದ್ದರಿಂದ ಕೆಲವು ಎಂ. ಎಲ್. ಎ. ಗಳು, ಕೆಲವು ತಾಲ್ಲೂಕು ಬೋರ್ಡ್ ಪ್ರೆಸಿಡೆಂಟರು, ಮತ್ತು ಎರಡನೇ ಸಂಘ ಸಂಸ್ಥೆಗಳಿಗೆ ಪ್ರಾತಿನಿಧ್ಯತೆಯನ್ನು ಕೊಡತಕ್ಕ ನೀತಿ ನಕ್ಕಾರದ್ದಿದೆ. ಆ ಪ್ರಕಾರ ಕೊಟ್ಟಿದ್ದೇವೆ.

Mr. SPEAKER.—Yes, next Mr. back bencher.

Sri M. S. KRISHNAN.—Sir, I respectfully submit that the word back bencher may not be used. We never expected that remark from the Hon'ble Speaker. I am very sorry.

Mr. SPEAKER.—I am very sorry that the expression is not properly understood.

Sri M. N. RAMANNA.—We are not back benchers. We are elected representatives. Please provide a seat in the front alone. I am an elected representative. You should not insult the Hon'ble members.

Mr. SPEAKER.—The member need not be very touchy about it. The word 'back bencher' in parliamentary Philology means, persons who do not occupy treasury benches of this side as well as that side. The back benchers include all the members, except the Ministers the Minister of State, the Deputy Ministers and the member of the opposition sitting in the front Bench.

Sri M. S. KRISHNAN.—The interpretation you have given regarding the word back bencher is not very correct. Back bencher is such a person who not only sits at the back but also who does not take part in the activities. I request you not to use it again.

ಶ್ರೀ ಎಸ್. ಬಂಗಾರಪ್ಪ.—ಏನೂ ಕೆಲಸಮಾಡದೆ ಮುಂದಿನ ಬೆಂಚ್‌ನಲ್ಲಿದ್ದರೂ ಅವರು ಬ್ಯಾಕ್ ಬೆಂಚರ್ ಆಗುತ್ತಾರೆ.

ಶ್ರೀ ಎಲ್. ಶ್ರೀಕಂಠಯ್ಯ.—'ಬ್ಯಾಕ್ ಬೆಂಚರ್' ಎಂದರೆ ಗಲಾಟೆ ಮನುಷ್ಯ ಎಂದು ಒಂದು ಅರ್ಥ.

ಶ್ರೀ ಎಸ್. ಬಂಗಾರಪ್ಪ.—ಬ್ಯಾಕ್ ಬೆಂಚರ್ ಎಂದು ತಾವು ಹೇಳಿರತಕ್ಕ ಪದವನ್ನು ಪ್ರೊಸೀಡಿಂಗ್ಸ್‌ನಿಂದ ಎಕ್ಸ್‌ಪಂಜ್ ಮಾಡಬೇಕು, ಸ್ವಾಮಿ.

Mr. SPEAKER.—I am sorry, the use of the word 'back bencher' is wrongly understood. I have used it in the sense that all the Hon'ble Members who do not occupy the treasury benches, *viz.*, the Ministers, Deputy Ministers and other Ministerial category and front opposition Bench. In that sense I have used that word. If it has hurt any member, I am very sorry. Of course, I have got the highest respect for every member of this House.

ಶ್ರೀ ಎನ್. ಎ. ಜನ್ನೇಗೌಡ.—ತಾಲ್ಲೂಕು ಬೋರ್ಡು ಅಧ್ಯಕ್ಷರನ್ನು ಕಮಿಟಿಯಲ್ಲಿ ಹಾಕಿರುವುದರಿಂದ ವಿಧಾನ ಸಭಾ ಸದಸ್ಯರನ್ನು ಹಾಕಿಲ್ಲ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಆದರೆ ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಕಾಂಗ್ರೆಸ್ಸಿಗೆ ವಿರೋಧವಾಗಿ ನಿಂತು ಗೆದ್ದಿರುವ ವಿಧಾನ ಸಭಾ ಸದಸ್ಯರನ್ನು ಹಾಕಿ, ಅವರ ಜೊತೆಗೆ ತಾಲ್ಲೂಕು ಬೋರ್ಡ್ ಅಧ್ಯಕ್ಷರನ್ನೂ ನಾಮಿನೇಟ್ ಮಾಡತಕ್ಕ ಅವಶ್ಯಕತೆ ಏನಿತ್ತು? ಮತ್ತು ಇಷ್ಟೆಲ್ಲ ನಡೆದಮೇಲೆ ಸರ್ಕಾರದವರು ಮಾನ್ಯ ಸದಸ್ಯರಾದ ನಂಜೇಗೌಡರು ಮತ್ತು ಜ್ವಾಲನಯ್ಯನವರು ಆಯಾ ಪ್ರದೇಶಕ್ಕೆ ಸಂಬಂಧಪಟ್ಟ ಶಾಸನಸಭಾ ಸದಸ್ಯರಾಗುವುದರಿಂದ ಅವರನ್ನೂ ನೇಮಕಮಾಡುವಂಥದ್ದನ್ನು ಪರಿಶೀಲಿಸುತ್ತೀರಾ? ಅದೇ ರೀತಿಯಾಗಿ ಕೆ. ಆರ್. ಎಸ್. ಕಮಿಟಿಯಲ್ಲಿ ಎಂ. ಎಲ್. ಎ. ಅಲ್ಲದವರಿಗೆ, ಬೇರೆ ತಾಲ್ಲೂಕಿನವರಿಗೆ, ಆ ಪ್ರದೇಶಕ್ಕೆ ಸಂಬಂಧಪಡದೆ ಇರುವವರಿಗೆ ಕೊಟ್ಟಿದ್ದೀರಿ? ಇದನ್ನೂ ಪುನರ್ಪರಿಶೀಲನೆ ಮಾಡುತ್ತೀರಾ ಸ್ವಾಮಿ?

ಶ್ರೀ ವೀರೇಂದ್ರ ಪಾಟೀಲ್.—ಕೆ. ಆರ್. ಎಸ್. ಕಮಿಟಿ ಏನಾಗಿದೆ ಎನ್ನುವಂಥದ್ದು ಈಗ ನನ್ನ ಮುಂದೆ ಇಲ್ಲ. ಅದರ ಬಗ್ಗೆ ಪ್ರತ್ಯೇಕವಾದ ಪ್ರಶ್ನೆ ಕೇಳಿದರೆ ಹೇಳಬಹುದು. ಈಗಾಗಲೇ ರೀಹ್ಯಾಬಿಲಿಟೇಷನ್ ಕಮಿಟಿ ರಚನೆ ಮಾಡಿದ್ದೇವೆ. ರೂಲ್ಸ್ ಪ್ರಕಾರ 8 ಜನರಿಗಿಂತ ಹೆಚ್ಚು ನಾನ್ ಅಫಿಷಿಯಲ್ ಮೆಂಬರ್ಸ್ ಇರುವುದಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ಇನ್ನು ಹೆಚ್ಚು ಜನರನ್ನು ಸೇರ್ಪಡೆ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

Sri M. H. JAYAPRAKASH NARAYAN.—Sir, the Hon'ble Chief Minister was pleased to say that they are certain principles in constituting these committees : I know there is a standing Government order to provide representation to at least one member of the Scheduled Caste in all boards and committees constituted by them. I find in this committee there is no representation given to Scheduled Caste Members. Is this the policy of the Government ?

Sri VEERENDRA PATIL.—I have already explained what are the principles the Government observe in constituting the Committee. I made it very clear.

Sri K. H. PATIL.—Sir, my friend asked whether the Scheduled caste members are included in this committee and whether it is not the policy of the Government to include at least one Member from the scheduled caste and the Chief Minister's reply is : 'I have already made it clear' ; Is it a proper answer ?

Sri C. K. RAJAIAH SETTY.—Is it not a fact that the raiyats of Arkalgud taluk are not vacating the lands and the work is held up ; don't you feel the necessity of having the M. L. A. representing that constituency on that committee so that you may have their co-operation in executing the project ; Is it not a fact that there is obstruction to the execution of the work ?

Sri VEERENDRA PATIL.—It is not a fact, Sir.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಹೇಮಾವತಿ ಜಲಾಶಯ ಯೋಜನೆಯಿಂದ ಯಾವ ತಾಲ್ಲೂಕಿನಲ್ಲಿ ಎಷ್ಟು ಎಕರೆ ಮುಳುಗಡೆಯಾಗುತ್ತದೆ ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಚಿಕ್ಕಮಗಳೂರಿಗೂ ಹೇಮಾವತಿ ಪ್ರಾಜೆಕ್ಟಿಗೂ ಯಾವ ಸಂಬಂಧವೂ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ಪುನರ್ವಸತಿ ವಿಷಯದಲ್ಲಿ ಕಮಿಟಿ ಕಾನ್‌ಸ್ಟಿಟ್ಯೂಟ್ ಮಾಡುವುದರಲ್ಲಿ ಇಷ್ಟೊಂದು ತೊಂದರೆಗಳನ್ನು ಈಗಾಗಲೇ ಮುಖ್ಯಮಂತ್ರಿಗಳು ತಿಳಿಸಿದ್ದಾರೆ. ಎಲ್ಲಾ ಎಂ.ಎಲ್.ಎ. ಗಳಿಗೂ ಸ್ಥಾನ ಕಲ್ಪಿಸಿಕೊಡುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವ ಮಾತನ್ನೂ ತಿಳಿಸಿದರು. ಯಾವುದೇ ಪುನರ್ವಸತಿ ಸಮಿತಿಯೇ ಆಗಲಿ ಸರ್ಕಾರದವರು ಆ ಸ್ಥಳಕ್ಕೆ ಸಂಬಂಧಪಟ್ಟ ಎಂ.ಎಲ್.ಎ. ಗಳನ್ನು ಅಲ್ಲಿ ನೇಮಕ ಮಾಡುವುದಕ್ಕೆ ಸರ್ಕಾರದವರು ಏನಾದರೂ ಪ್ರಯತ್ನ ಮಾಡುತ್ತೀರಾ ? ಆ ಕ್ಷೇತ್ರದಎಂ.ಎಲ್.ಎ. ಇರಬೇಕೆಂದು ರೂಲ್ಸ್ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ನಾನು ಅನೇಕ ಸಲ ಹೇಳಿದ್ದೇನೆ. ಈ ರೀಹ್ಯಾಬಿಲಿಟೇಷನ್ ಕಮಿಟಿಗೆ ಸದಸ್ಯರನ್ನು ನೇಮಕ ಮಾಡುವಾಗ ಆ ಕ್ಷೇತ್ರ, ಈ ಕ್ಷೇತ್ರ ಎನ್ನುವ ಪ್ರಶ್ನೆ ಬರುವುದಿಲ್ಲ. ಎಂ.ಎಲ್.ಎ. ಗಳನ್ನು ಹಾಕತಕ್ಕಂಥ ಅವಶ್ಯಕತೆ ಇರುವುದಿಲ್ಲ. ತಾಲ್ಲೂಕು ಬೋರ್ಡ್ ಪ್ರೆಸಿಡೆಂಟ್ ಮತ್ತು ವೈಸ್ ಪ್ರೆಸಿಡೆಂಟರಾಗಿ ಇರತಕ್ಕಂಥವರನ್ನು ಮತ್ತು ಅನೇಕ ಸಂಘಸಂಸ್ಥೆಗಳಲ್ಲಿ ಪ್ರತಿನಿಧಿಗಳಾಗಿರತಕ್ಕಂಥವರನ್ನು ಹಾಕಬೇಕು. ಇಂತಹ ಸಂದರ್ಭದಲ್ಲಿ ಎಂ. ಎಲ್. ಎ. ಗಳನ್ನು ಹಾಕುವುದು ಕಷ್ಟ.

ಶ್ರೀ ಹೆಚ್. ಬಿ. ಜ್ಯಾಲನಯ್ಯ.—ಮಾನ್ಯ ಮುಖ್ಯಮಂತ್ರಿಗಳು ಹೇಳಿದರು ಈ ಕಮಿಟಿಯನ್ನು ಕಾನ್‌ಸ್ಟಿಟ್ಯೂಟ್ ಮಾಡುವುದರಲ್ಲಿ ಒಂದು ತತ್ವವನ್ನು ಇಟ್ಟುಕೊಂಡಿದ್ದೇವೆ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ಕೆಲಸ ಮಾಡಿರತಕ್ಕಂಥವರಿಗೆ ಅವಕಾಶ ಕೊಡಬೇಕು ಎಂದು. ಆದರೆ 3-4 ನಾನ್ ಆಫಿಷಿಯಲ್ಸ್ ಮತ್ತು ಶ್ರೀಮಾನ್ ಕೆ.ಪಿ. ಚಿಕ್ಕೇಗೌಡರು ಮತ್ತು ತಾಲ್ಲೂಕು ಬೋರ್ಡ್ ಪ್ರೆಸಿಡೆಂಟರು ಆ ಕಮಿಟಿಯಲ್ಲಿ ಇದ್ದಮೇಲೆ ಶ್ರೀಮಾನ್ ಬಿ. ಆರ್. ನಂಜುಂಡೇಗೌಡರನ್ನು ಹಾಕಬೇಕಾದಂಥ ಅವಶ್ಯಕತೆ ಏನು ಇತ್ತು ? ಮತ್ತು ಹಾಸನದಲ್ಲಿ ಹೇಮಾವತಿ ಕಟ್ಟಡದ ಶಂಕುಸ್ಥಾಪನೆ ಮಾಡುವ ಸಂದರ್ಭದಲ್ಲಿ ಆ ಜಿಲ್ಲೆಯ ಎಂ.ಎಲ್.ಎ. ಮತ್ತು ಒಬ್ಬ ಎಂ.ಪಿ.ಗೆ ಅಲ್ಲಿ ವೇದಿಕೆಯ ಮೇಲೆ ಒಂದು ಸರಿಯಾದ ಸ್ಥಳವನ್ನು ಕೊಡದೆ ಅವಹೇಳನ ಮಾಡುವುದಾದರೆ ಅವರನ್ನು ಏತಕ್ಕೆ ಕರೆಸ ಬೇಕಾಗಿತ್ತು ?

ಶ್ರೀ ವೀರೇಂದ್ರ ಪಾಟೀಲ್.—ಸದಸ್ಯರುಗಳ ವಿವರಣೆ ನೋಡಿದರೆ ಇದರಲ್ಲಿ ಏನೋ ರಾಜಕೀಯ ಇದೆ ಎಂದು ಗೊತ್ತಾಗುತ್ತದೆ. ಅವೊತ್ತಿನ ದಿವಸ 6-7 ಎಂ. ಎಲ್. ಎ. ಗಳು ಇದ್ದರು. ನಂಜೇಗೌಡರು ಆ ಸ್ಥಳದಿಂದ ಎದ್ದು ಹೋದ ಮೇಲೆ ದೇವೇಗೌಡರು, ಚಿಕ್ಕೇಗೌಡು ಏತಕ್ಕೆ ಹೋಗಲಿಲ್ಲ ? ಅವರು ವಿರೋಧ ಪಕ್ಷದ ಪ್ರತಿನಿಧಿಗಳಾಗಿ ಕೂತಿದ್ದರೇ, ಅಥವಾ ಆಳುವ ಪಕ್ಷದ ಪ್ರತಿನಿಧಿಯಾಗಿ ಕೂತಿದ್ದರೇ, ಹಾಗಿದ್ದರೆ 3 ಜನ ಎಂ.ಎಲ್.ಎ. ಗಳೂ ಕೂಡ ಹೋಗಬೇಕಾಗಿತ್ತು. ಆ ರೀತಿ ಅಸಮಾಧಾನ ತೋರಿಸುವುದು ಸರಿಯಲ್ಲ.

Sri S. SIVAPPA.—In view of the policy of the Government to have the chosen representatives of every taluk on the committee, will the Government consider the possibility of including all the sitting MLAs of Hassan Taluk and Arkalgud Taluk wherever the project area extends and expand the committee by including two or three more members with a view to broad-base the Committee and give proper representation to all areas involved.

Sri VEERENDRA PATIL.—Sir, my difficulty is, according to rules, the number is limited. I cannot take more than 8 non-officials members in that Committee. I have taken eight non-officials and there is no scope for taking any more.

ಶ್ರೀ ಕೆ. ಹೆಚ್. ಪಾಟೀಲ್.—ಮುಖ್ಯ ಸಚಿವರು ಒಂದು ತತ್ವವನ್ನು ಅನುಸರಿಸಿದ್ದೇವೆ ನನ್ನಲ್ಲಿ ರಾಜಕೀಯ ಇಲ್ಲ ಎಂದು ಹೇಳುತ್ತಾರೆ. ಈ ಕಮಿಟಿಯಲ್ಲಿ ಟಿ.ಡಿ.ಬಿ. ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಇದ್ದಾರೆ. ಉಳಿದವರನ್ನು ಬಿಟ್ಟಿದ್ದಾರೆ. ಟಿ.ಡಿ.ಬಿ. ಅಧ್ಯಕ್ಷರಿಗೆ ಚೆಕ್ಕಿಕಲ್ ವಿಷಯ ಏನು ಗೊತ್ತಿದೆ. ವಿರೋಧಪಕ್ಷದ ಸಹಕಾರವನ್ನು ಬೇಡುತ್ತಾರೆ. ಆದರೆ ವಿರೋಧ ಪಕ್ಷದ ನಾಯಕರ ನ್ನಾಗಲಿ ಅಥವಾ ಬೇರೆ ಯಾರನ್ನೇ ಆಗಲಿ ಆ ಕಮಿಟಿಯಲ್ಲಿ ಸೇರಿಸದೇ ಇರುವುದಕ್ಕೆ ಕಾರಣ ಏನು ಹೇಳುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಇದನ್ನು ಅನೇಕ ಸಲ ಹೇಳಿದ್ದೇನೆ. ಪುನಃ ಅದನ್ನೇ ರಿಪೀಟ್ ಮಾಡಬೇಕಾಗುತ್ತದೆ.

ಶ್ರೀ ಹೆಚ್. ಬಿ. ಜ್ವಾಲನಯ್ಯ.—ತಾಲ್ಲೂಕ್ ಬೋರ್ಡ್ ಅಧ್ಯಕ್ಷರು ಮತ್ತು ಉಪಾಧ್ಯಕ್ಷರನ್ನೇ ಈ ಸಂಸ್ಥೆಯ ಪ್ರತಿನಿಧಿಯಾಗಿ ಕೊಡಬಹುದಾಗಿತ್ತು. ಆದರೆ ಅಲ್ಲಿ ಶ್ರೀಯುತರುಗಳಾದ ಚಿಕ್ಕೇಗೌಡರು ದೇವೇಗೌಡರು ಮತ್ತು ತಿಮ್ಮಪ್ಪಗೌಡರು ಇವರುಗಳಿಗೆ ಕೊಡಬೇಕಾದಂಥ ಅವಶ್ಯಕತೆ ಏನು ಇತ್ತು ?

ಶ್ರೀ ವೀರೇಂದ್ರ ಪಾಟೀಲ್.—ಯಾರು ಯಾರಿಗೆ ಕೊಡಬೇಕೆನ್ನುವುದನ್ನು ಅಂದಾಜು ಮಾಡಲು ಸರ್ಕಾರದವರು ಒಂದು ಕಮಿಟಿ ಕಾನ್‌ಸ್ಟಿಟ್ಯೂಟ್ ಮಾಡುತ್ತಾರೆ. ಆ ಕಮಿಟಿ ಅಭಿಪ್ರಾಯದ ಪ್ರಕಾರ ಅದಕ್ಕೆ ಯಾರು ಯಾರನ್ನು ತೆಗೆದುಕೊಳ್ಳಬೇಕೆಂದು ಸೂಚನೆ ಮಾಡಿದರೋ ಅಂತಹವರನ್ನು ತೆಗೆದುಕೊಂಡಿದ್ದಾರೆ. ಅವರಿಗೆ ಏಕೆ ಕೊಟ್ಟರಿ, ಇವರಿಗೆ ಏಕೆ ಕೊಟ್ಟರಿ ಎನ್ನುವ ಡಿಟೇರ್ ಎಕ್ಸ್‌ಪ್ಲನೇಷನ್ ಕೊಡುವುದಕ್ಕೆ ಸಾಧ್ಯವಿಲ್ಲ.

Sri S. S. SHETTAR.—I want to ask one question: whether the members of different political parties are inculded in this committee with a view to seek the co-operation ?

Mr. SPEAKER.—Whenever questions are asked, the Hon'ble Ministers give their replies. The replies may satisfy the Hon'ble Members and sometimes they may not satisfy them. If any Hon'ble Member is not satisfied with the answers furnished, it is open to him to pursue their point in any appropriate manner provided under the Rules. There are plenty of parliamentary opportunities.

Sri S. S. SHETTAR.—I want to elicit the information whether the members of different political parties are included in this Committee so that I can pursue it in the appropriate manner under the Rules.

Sri VEERENDRA PATIL.—The question of giving representation to different political parties in the rehabilitation committee does not arise. We have to give representation to representatives of that area.

9-30 A.M.

ಶ್ರೀ ಎಸ್. ಶಿವಪ್ಪ.—ಈ ಕಮಿಟಿಯನ್ನು ನೇಮಕ ಮಾಡುವ ಸಂದರ್ಭದಲ್ಲಿ ಯಾವ ಒಂದು ನಿಯಮವನ್ನು ಅನುಸರಿಸಿದ ಹಾಗೆ ಕಾಣುವುದಿಲ್ಲ. ಅಲ್ಲಿಂದ ಚುನಾಯಿತರಾದ ಸದಸ್ಯರನ್ನು ಸೇರಿಸಿಲ್ಲ ಮತ್ತು ಹೇಮಾವತಿ ಚಾನಲ್ ಎಲ್ಲೆಲ್ಲಿ ಹೋಗುತ್ತದೆ ಆ ಪ್ರದೇಶದಲ್ಲಿರತಕ್ಕ ಚೆನ್ನರಾಯಪಟ್ಟಣದ ಸದಸ್ಯರು ಕಾಂಗ್ರೆಸ್‌ನಿಂದಾಗಲಿ ಅಥವಾ ನಾನ್ ಕಾಂಗ್ರೆಸ್ಸಿನಿಂದಾಗಲಿ, ಒಬ್ಬ ವ್ಯಕ್ತಿಯನ್ನೂ ಹಾಕದಿರಲು ಕಾರಣವೇನು ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಪದೇ ಪದೇ ಅದನ್ನೇ ಕೇಳುತ್ತಿದ್ದಾರೆ; 8 ಜನರ ಪ್ರತಿನಿಧಿಗಳನ್ನು ಹಾಕಬೇಕಾದಂತಹ ಪರಿಸ್ಥಿತಿ ಇತ್ತು, ಹಾಕಿದ್ದೇವೆ. ಎಲ್ಲರಿಗೂ ಪ್ರಾತಿನಿಧ್ಯ ಕೊಡುವುದಕ್ಕೆ ಸಾಧ್ಯವಿಲ್ಲ.

Sri S. SIVAPPA.—Government have put three persons from one Taluk and not even one from that biggest Taluk. Is that justice ? Hemavathi covers the biggest area in my Taluk; they have neglected

that Taluk. They have the guts to say that they have neglected that important Taluk. I demand an answer from the Government as to why they omitted that Taluk.

Mr. SPEAKER.—I quite appreciate the pious indignation. But let that point be raised in an appropriate manner. The member can comment on Government's action at another appropriate time; there are many opportunities. Only one last supplementary.

ಶ್ರೀ ಜಿ. ದುಗ್ಗಪ್ಪ.—ಈ ಯೋಜನೆಯ ನಿರ್ಮಾಣದ ಪ್ರದೇಶದಲ್ಲಿ ನುಮಾರು ಐದನೇ ಒಂದು ಭಾಗದಷ್ಟು ಜನಸಂಖ್ಯೆ ಹಿಂದುಳಿದ ಜನಾಂಗ. ಅವರ ಹಿತರಕ್ಷಣೆಯನ್ನು ಕಾಪಾಡಲು ಈ ಸಮಿತಿಯಲ್ಲಿ ಒಬ್ಬ ಆ ಜನಾಂಗದ ಪ್ರತಿನಿಧಿಯನ್ನಾದರೂ ನೇಮಕ ಮಾಡಲಿಲ್ಲ. ಇನ್ನಾದರೂ ಆ ಹಿಂದುಳಿದ ಜನಾಂಗದ ಒಬ್ಬ ಪ್ರತಿನಿಧಿಯನ್ನು ನೇಮಕಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ನಾನು ಈಗಾಗಲೇ ಹೇಳಿದ್ದೇನೆ. ಈ ಸಮಿತಿಯನ್ನು ಇನ್ನೂ ವಿಸ್ತರಣೆ ಮಾಡುವುದು ಸಾಧ್ಯವಿಲ್ಲ. ಅದರಲ್ಲಿ ಕುಲ, ಜಾತಿ ನೋಡಿಕೊಂಡು ರೆಪ್ರಸೆಂಟೇಷನ್ ಕೊಡುವುದಕ್ಕಾಗುವುದಿಲ್ಲ.

ಶ್ರೀ ಬಿ. ದೊಡ್ಡಬೋರೇಗೌಡ.—ಇಂಥ ಕಮಿಟಿಗಳನ್ನು ನೇಮಕಮಾಡುವಾಗ ಸರ್ಕಾರದವರು ತಜ್ಞತೆಯನ್ನು ಪರಿಶೀಲಿಸುತ್ತಾರೋ, ಅಥವಾ ಪಕ್ಷದ ಆಧಾರದ ಮೇಲೆ ಪರಿಶೀಲನೆ ಮಾಡಿ ನೇಮಕ ಮಾಡುತ್ತಾರೋ ? ಕೆ. ಆರ್. ಸಾಗರಕ್ಕೂ ಕಮಿಟಿ ನೇಮಕಮಾಡುವಾಗ ಪಕ್ಷಪಾತ ಮಾಡಿದ್ದಾರೆ. ನುಮಾರು ಒಂದೂವರೆ ಲಕ್ಷ ಜನ ಪ್ರತಿನಿಧಿಯಾದಂತಹ ನಂಜೇಗೌಡರನ್ನು ಮತ್ತು ಶ್ರೀ ಜ್ವಾಲನಯ್ಯನವರನ್ನು ಬಿಟ್ಟು ಇವರು ಠೇವಣಿ ಕಳಕೊಂಡಂತಹ ಸದಸ್ಯರನ್ನು ನೇಮಕ ಮಾಡಿದ್ದಾರೆ. ನೀವು ಯಾರು ನಿಮಗೆ ಕೈಯೆತ್ತುತ್ತಾರೆ, ಅವರಿಗೆ ಪ್ರಾತಿನಿಧ್ಯ ಕೊಟ್ಟಿದ್ದೀರಲ್ಲವೇ, ಇದು ಸರಿಯೇ ?

ಶ್ರೀ ವೀರೇಂದ್ರ ಪಾಟೀಲ್.—ಇವರು ಕೇಳುವುದು ಪದೇ ಪದೇ ಅದೇ ಪ್ರಶ್ನೆಯನ್ನು. ನಾನು ಹೇಳಿದ್ದೇನೆ, ಎಲ್ಲಾ ರೀತಿಯ ಪ್ರತಿನಿಧಿಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಕೇವಲ ಆರಿಸಿಬಂದಂತಹ ಅಸೆಂಬ್ಲಿಮೆಂಬರನ್ನು ಮಾತ್ರವಲ್ಲ. ತಾಲ್ಲೂಕು ಬೋರ್ಡಿನಿಂದಲೂ ತೆಗೆದುಕೊಳ್ಳಬೇಕಾಗಿರುವುದರಿಂದ, ಎಲ್ಲರನ್ನೂ ತೆಗೆದುಕೊಂಡಿದ್ದೇವೆ.

Sri S. R. BOMMAI.— At this rate, most important questions will lapse. We are losing our valuable rights. Half-an-hour is spent on one question.

Mr. SPEAKER.—I agree.

ಶ್ರೀ ಎಚ್. ಎನ್. ನಂಜೇಗೌಡ.—ಮಾನ್ಯ ಮಂತ್ರಿಯವರು ಶ್ರೀ ಸಿ. ಕೆ. ರಾಜಯ್ಯ ಶೆಟ್ಟರು ಕೇಳಿದ ಪ್ರಶ್ನೆಗೆ ಉತ್ತರ ಕೊಡುತ್ತಾ, ರೈಟ್ ಬ್ಯಾಂಕಿನವರೆಗೂ ಜನಗಳು ಜಮೀನು ಬಿಡದೆ ನಿಂತಿಲ್ಲ ಎನ್ನುವ ಮಾತನ್ನು ಹೇಳಿದರು. ಆರು ತಿಂಗಳಿಂದ ಕಂಟ್ರಾಕ್ಟರು ಕೆಲಸ ನಿಲ್ಲಿಸಿದ್ದಾರೆ, ಇದು ಯಾರ ತಪ್ಪು ? ಎರಡನೆಯದಾಗಿ ಪೊಲಿಟಿಕಲ್ ಡಿಸಿಶನ್ ತೆಗೆದುಕೊಳ್ಳುವುದಿಲ್ಲವೆಂದು ಹೇಳಿದರು. Then I want to know whether the Government have given a portion of this work to Balaji Engineering Construction Company, much against the recommendation of the Chief Engineer.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಅದೇ ಪ್ರಶ್ನೆಯನ್ನು ಕೇಳುತ್ತಾರೆ. ಆದರೆ ನಾನು ಹಾಗೆ ಹೇಳಿಲ್ಲ. ಮಾನ್ಯ ರಾಜಯ್ಯಶೆಟ್ಟರು ಏನು ಕೇಳಿದರೆಂದರೆ, ಅಲ್ಲಿನ ಪ್ರತಿನಿಧಿಗಳಿಗೆ ತಾವು ಕಮಿಟಿಯಲ್ಲಿ ಹಾಕದಿರುವುದರಿಂದ ಅಲ್ಲಿಯ ಜನಗಳು ಹಾಹಾಕಾರ ಮಾಡಿ, ಬೇಕಾದಂತಹ ಭೂಮಿ ಕೊಡದಿರುವುದು ನಿಜವಲ್ಲವೇ ಎಂದು. ಅದಕ್ಕೆ ಭೂಮಿ ಕೊಡುವ ವಿಚಾರದಲ್ಲಿ ತಕರಾರು ಇಲ್ಲದೆ ಇಲ್ಲ, ತಕರಾರು ಇದೆ, ಲ್ಯಾಂಡ್ ಅಕ್ವಿಸಿಶನ್ ಪ್ರೊಸೀಡಿಂಗ್ಸ್ ಆಗುತ್ತಾ ಇದೆ, ಪ್ರೊಸೀಡಿಂಗ್ಸ್ ಮುಗಿದ ಮೇಲೆ ಬೇಕಾದಂತಹ ಭೂಮಿ ಸಿಗುತ್ತದೆ.

Mr. SPEAKER.—No more supplementaries now on this question. If the hon. House agrees, I will extend the duration of the Question Hour by half-an-hour. Is the House agreeable ?

HON'BLE MEMBERS.—Yes.

Mr. SPEAKER.—The House is agreeable. Question hour is extended by half-an-hour.

## Primary Schools in Khanapur and Belgaum Taluks

64. Sri N. B. SIRDESAI (Khanapur).—

Will the Minister for Education be pleased to state :—

(*a*) the number of villages and Hamlets in Khanapur and Belgaum Taluks where there are no primary schools ;

(*b*) whether Government is aware of the fact that Khanapur and Belgaum taluks are Malnad and Backward Taluks and the Hamlets and villages therein are situated at distant places and they are very thinly populated ;

(*c*) whether Government have ever considered that the present conditions regarding the minimum number of students and population for opening new primary schools can never be fulfilled in Malnad area and the thinly populated and scattered villages and Hamlets will never get educational facilities at that rate ;

(*d*) if so, whether there is any proposal to relax the condition regarding the number of students from 40 to 15 and the population of a village from 250 to 50 with a view to provide educational facilities in these villages ?

*A.*—Sri N. M. KOTRABASAIAH SOGI (Deputy Minister for Education). —

(*a*) Khanapur ... 10
Belgaum ... 6

(*b*) Yes.

(*c*) It will be too costly to provide separate schools in such areas.

Such thinly populated areas will have to be served by peripatetic schools, centrally located residential schools and hostels.

(*d*) This is not considered necessary.

Sri N. B. SIRDESAI. —There are no primary schools in 10 villages in Khanapur Taluk and in 6 villages in Belgaum Taluk. So, will the Government extend special concession to these malnad hamlets if Government really and seriously mean extending educational facilities ?

Sri N. M. KOTRABASAIAH SOGI.—Educational facilities for thinly populated areas will be provided by peripatetic schools centrally located residential schools and hostels.